**ಓ ಎಸ್ 9/2021 ಡಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 22.11.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ಒಳಚರಂಡಿ ವ್ಯವಸ್ಥೆಗೆ ಅಂದಾಜು 5 ಎಕರೆ 20 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಆ ಜಮೀನಿನಲ್ಲಿ ಒಳಚರಂಡಿ ವ್ಯವಸ್ದೆಯ ಕಾಮಗಾರಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸಮೀಪದಲ್ಲಿ ನನಗೆ ಸೇರಿದ ಪೆಟ್ರೋಲ್ ಬಂಕ್ ಇದೆ ಎಂದರೆ ಸುಮಾರು ಅರ್ಧ ಕಿಲೋ ಮೀಟರ್ ದೂರದಲ್ಲಿದೆ. ಒಳಚರಂಡಿ ವ್ಯವಸ್ಥೆಗೆ ಭೂಸ್ವಾಧೀನಗೊಂಡಿರುವ ಜಮೀನಿನ ಅಕ್ಕಪಕ್ಕ ನಮಗೆ ಸೇರಿದ ಬೇರೆ ಜಮೀನು ಇದೆ. ಆ ಜಮೀನುಗಳ ಬಳಿ ನಾನು ಹೋಗಿ ಬರುವುದಿಲ್ಲ, ಸಾಕ್ಷಿ ಮುಂದುವರಿದು ತಾನು ಮೈಸೂರಿನಲ್ಲಿ ಇರುವ ಕಾರಣ ತನ್ನ ತಮ್ಮ ಜಮೀನುಗಳಲ್ಲಿ ಹೋಗಿ ಬರುತ್ತಾರೆ ಎಂದು ಹೇಳುತ್ತಾರೆ. ಜಮೀನಿನ ಬಗ್ಗೆ ನಾನು ಕೇಳಿ ತಿಳಿದುಕೂಂಡಿಲ್ಲ, ಆದರೆ ಅದರ ಅಕ್ಕಪಕ್ಕ ಇರುವ ನಮ್ಮ ಜಮೀನುಗಳ ಬಗ್ಗೆ ನಾನು ಕೇಳಿ ತಿಳಿದುಕೊಳ್ಳುತ್ತಿರುತ್ತೇನೆ. ಒಳಚರಂಡಿ ವ್ಯವಸ್ಥೆಗೆ ಭೂಸ್ವಾಧೀನಗೊಂಡಿರುವ ಜಮೀನಿನ ಪಶ್ಚಿಮಕ್ಕಾದಂತೆ ಹಳ್ಳ ಇದೆ ಎಂದರೆ ನನಗೆ ಗೊತ್ತಿಲ್ಲ. ಆ ಹಳ್ಳ ಮತ್ತು ಆ ಹಳ್ಳದ ಖರಾಬು ಜಮೀನಿನ ಪೂರ್ವಕ್ಕೆ ನಮ್ಮ ತಾಯಿಗೆ ಸೇರಿದ 0.15 ಗುಂಟೆ ಜಮೀನು ಇದೆ ಎಂದರೆ, ಜಮೀನು ಇದೆ, ಆದರೆ ಅದು ಯಾವ ದಿಕ್ಕಿನಲ್ಲಿ ಇದೆ ಎಂದು ನಿಖರವಾಗಿ ಹೇಳಲು ನಕ್ಷೆ ಸಿದ್ದವಾಗಿಲ್ಲವಾದ ಕಾರಣ ಆ ಜಮೀನು ಯಾವ ದಿಕ್ಕಿನಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ. ಆ 0.15 ಗುಂಟೆ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ. ಆ 0.15 ಗುಂಟೆ ಜಮೀನಿನ ಪಶ್ಚಿಮಕ್ಕೆ ಸದರಿ ಹಳ್ಳ ಇದೆ. ನಮ್ಮ ತಾಯಿಯ ಸದರಿ 0.15 ಗುಂಟೆ ಜಮೀನು ಮತ್ತು ಆ ಹಳ್ಳದ ನಡುವೆ ನಮ್ಮ ತಂದೆಗೆ 0.24 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ 0.24 ಗುಂಟೆ ಜಮೀನು ತನ್ನ ತಂದೆಗೆ 1994 ರಲ್ಲಿ ಮಂಜೂರಾಗಿದೆ ಎಂದು ಹೇಳುತ್ತಾರೆ. ಆ ಜಮೀನಿನ ಚಕ್ಕುಬಂದಿ ಉತ್ತರಕ್ಕೆಃ ಹಳ್ಳ, ದಕ್ಷಿಣಕ್ಕೆಃ ಹನುಮೇಗೌಡರವರ ಮಗ ಚಂದ್ರರವರ ಜಮೀನು,

ಪೂರ್ವಕ್ಕೆ: ಚಿಕ್ಕದೇವೇಗೌಡರ ಮಗ ರಮೇಶ್ ಮತ್ತು ಹನುಮೇಗೌಡರ ಮಗ ಚಂದ್ರೇಗೌಡ ಮತ್ತು ಪಶ್ಚಿಮಕ್ಕೆ: ನಮ್ಮ ಅಜ್ಜಿಗೆ ಸೇರಿದ 0.06 ಗುಂಟೆ ಜಮೀನು. ಹಳ್ಳದ ಉತ್ತರ ಭಾಗಕ್ಕೆ ನಮ್ಮ ತಂದೆಗೆ ಮಂಜೂರಾಗಿರುವ ಸದರಿ 0.24 ಗುಂಟೆ ಜಮೀನು ಬರುತ್ತದೆ. ನಾನು ಮೇಲೆ ಹೇಳಿದ ಚಕ್ಕುಬಂದಿಯೊಳಗೆ ನಮ್ಮ ತಂದೆಗೆ ಮಂಜೂರಾಗಿರುವ ಸದರಿ 0.24 ಗುಂಟೆ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಮಂಜೂರಾಗಿರುವ ಆ 0.24 ಗುಂಟೆ ಜಮೀನು ಹಳ್ಳದ ಖರಾಬಿನಲ್ಲಿ ನಮ್ಮ ತಾಯಿಯ ಜಮೀನಿನ ಪಶ್ಚಿಮಕ್ಕೆ ಇರುವ ಜಮೀನು ಎಂದರೆ ಸರಿಯಲ್ಲ.

ನಿಶಾನೆ ಡಿ 20 ರ ಪ್ರಕಾರ ನಮ್ಮ ತಂದೆಗೆ ಎಂ ಆರ್ 11/1995-96 ರ ರೀತ್ಯಾ ಸರ್ವೆ ನಂ. 72/1 ರಲ್ಲಿ 0.24 ಗುಂಟೆ ಖಾತಾ ಆಗಿದೆ ಎಂದರೆ ಸರಿ. ಸದರಿ ಎಂ ಆರ್ ನಲ್ಲಿ ನಮೂದು ಆಗಿರುವ ಸಂಗತಿಗಳ ಪ್ರಕಾರ ನನ್ನ ತಂದೆಗೆ ಬಾಜು ಖರಾಬು ಜಾಗದಲ್ಲಿ 0.24 ಗುಂಟೆ ಜಮೀನು ಮಂಜೂರು ಆಗಿದೆ ಎಂದು ಹೇಳಿದೆ ಎಂದರೆ ಸರಿ. ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಯಾವುದೇ ಕಾಮಗಾರಿಯನ್ನು ಇದುವರೆವಿಗೂ ನಡೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾಮಗಾರಿ ನಡೆದಿಲ್ಲ ಎಂಬ ಸಂಗತಿ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಎಂ.ಬಿ.ಎ ಓದಿದ್ದೇನೆ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ಪೈಕಿ ನನ್ನ ತಂದೆ ಹಾಗೂ ಕೊನೆಯ ಚಿಕ್ಕಪ್ಪರವರಾದ ನಾಗರಾಜೇಗೌಡ ಓದುಬರಹ ತಿಳಿದವರಾಗಿದ್ದು ಬುದ್ಧಿವಂತರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮೊದಲನೇ ಚಿಕ್ಕಪ್ಪ ವೆಂಕಟೇಶ್ ರವರಿಗೆ ಓದು ಬರಹ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಬದುಕಿದ್ದಾಗ ನಮ್ಮ ಚಿಕ್ಕಪ್ಪ ವೆಂಕಟೇಶ್ ರವರು ಪ್ರತಿಯೊಂದೂ ವ್ಯವಹಾರಕ್ಕೂ ನನ್ನ ತಂದೆ ಮತ್ತು ಕೊನೆಯ ಚಿಕ್ಕಪ್ಪರವರಾದ ನಾಗರಾಜೇಗೌಡ ರವರ ಮೇಲೆ ಅವಲಂಬಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರಾಪ್ತ ವಯಸ್ಕನಾದ ನಂತರ ರಾಜಕೀಯದಲ್ಲಿ ಗುರುತಿಸಿಕೊಂಡು

ಬೆಳೆದು ಬಂದಿದ್ದೇನೆ ಎಂದರೆ ಸರಿ. 2015 ರಲ್ಲಿ ನಾನು ಪಾಂಡವಪುರ ಪುರಸಭೆಯ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ತದನಂತರ ಟಿ ಎ ಪಿ ಸಿ ಎಂ ಎಸ್ ಲಿಮಿಟೆಡ್ ನಲ್ಲಿ ಸಹ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ನಾನು ರಾಜಕೀಯದಲ್ಲಿ ಮಂಚೂಣಿಯಲ್ಲಿದ್ದು ಪ್ರಭಾವಶಾಲಿ ವ್ಯಕ್ತಿಯಾಗಿದ್ದೆ ಎಂದರೆ ಸರಿಯಲ್ಲ. ಈಗಲೂ ಸಹ ಪುರಸಭೆಯಲ್ಲಿ ನಾನು ಹೇಳಿದ ಮಾತುಗಳೇ ನಡೆಯುತ್ತಿವೆ ಮತ್ತು ನಾನು ಹೇಳಿದ ಹಾಗೆಯೇ ಕೆಲಸ ಕಾರ್ಯಗಳು ನಡೆಯುತ್ತವೆ ಎಂದರೆ ಸರಿಯಲ್ಲ. ಹಾಗೆಯೇ ಕಂದಾಯ ಇಲಾಖೆ ಮತ್ತು ಭೂಮಾಪನ ಇಲಾಖೆಯಲ್ಲಿ ನಾನು ಪ್ರಭಾವಶಾಲಿ ವ್ಯಕ್ತಿಯಾಗಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆಗೆ ಮಂಜೂರಾಗಿದ್ದ 0.24 ಗುಂಟೆ ಜಮೀನು ಒಳಚರಂಡಿ ವ್ಯವಸ್ಥೆ ಕಾಮಗಾರಿಗೆ ಭೂಸ್ವಾಧೀನವಾಗಿರದೆ ಇದ್ದರೂ ಸಹ ನಾನು ಮತ್ತು ನನ್ನ ತಂದೆ ಸೇರಿಕೊಂಡು ನಮ್ಮ ಪ್ರಭಾವ ಬೆಳೆಸಿ ನಮ್ಮ ತಂದೆಯ ಜಮೀನು ಭೂಸ್ವಾಧೀನವಾಗಿದೆ ಎಂಬಂತೆ ಪ್ರಾರಂಭಿಕ ಅಧಿಸೂಚನೆ ಮತ್ತು ಅಂತಿಮ ಅಧಿಸೂಚನೆ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ 0.24 ಗುಂಟೆ ಜಮೀನು ಭೂಸ್ವಾಧೀನಗೊಳ್ಳದೆ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಐತೀರ್ಪು ಪಡೆದುಕೊಂಡು ಪರಿಹಾರ ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಭೂ ಸ್ವಾಧೀನದ ಪರಿಹಾರದ ಕಡತವನ್ನು ನ್ಯಾಯಾಲಯಕ್ಕೆ ತರಿಸಿಕೊಂಡು ಎಲ್ ಎ ಸಿ 3/2013 ರಲ್ಲಿಯೂ ಸಹ ನ್ಯಾಯಾಲಯಕ್ಕ ವಾಸವ ಸಂಗತಿಗಳನ್ನು ಮರೆ ಮಾಚಿ ತಪ್ಪು ಮಾಹಿತಿ ನೀಡಿ ಹೆಚ್ಚಿನ ಪರಿಹಾರ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಎಲ್ ಎ ಸಿ ಪ್ರಕರಣದಲ್ಲಿ ಐ ತೀರ್ಪು ಹೊರಡಿಸಲಾಗಿದೆಯಾದರೂ ಇನ್ನು ಪರಿಹಾರದ ಹಣ ಬಂದಿಲ್ಲ ಎನ್ನುತ್ತಾರೆ. ಸದರಿ ಐ ತೀರ್ಪಿನ ಆಧಾರದ ಮೇಲೆ ಅಮಲ್ಜಾರಿ ಅರ್ಜಿ ಸಂಖ್ಯೆ 27/2021 ನ್ನು ದಾಖಲಿಸಿದ್ದೇವೆ ಎಂದರೆ ಸರಿ.

ನಮ್ಮ ಅಜ್ಜ ಮತ್ತು ಅಜ್ಜಿಯ ಜೀವನಾಂಶಕ್ಕಾಗಿ ಬಿಟ್ಟಿದ್ದ ಅಜ್ಜಪಾಲಿನ ಆಸ್ತಿಗಳಲ್ಲಿ

ಪಾಲು ಕೋರಿ ಈ ದಾವೆಯನ್ನು ಹೂಡಲಾಗಿದೆ ಎಂದರೆ ಸರಿ. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ಈ ದಾವೆ ಹೂಡಿದ ನಂತರ ಕಂದಾಯ ಅಧಿಕಾರಿಗಳು ಮತ್ತು ಭೂಮಾಪನ ಅಧಿಕಾರಿಗಳು ಒಳಚರಂಡಿ ಕಾಮಗಾರಿಗೆ ಯಾವ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಸ್ಥಳಪರಿಶೀಲಿಸಿ ಅಳತೆ ಕಾರ್ಯ ಮಾಡಿದರು ಎಂದರೆ ಸರಿ. ಸಾಕ್ಷಿ ಮುಂದುವರಿದು ತಾನು ತನ್ನ ತಂದೆಯ 0.24 ಗುಂಟೆ ಜಮೀನು ಒಳಚರಂಡಿ ಕಾಮಗಾರಿಗೆ ಭೂ ಸ್ವಾಧಿನವಾಗಿದೆಯೋ ಎಂಬ ಬಗ್ಗೆ ದೃಢೀಕರಣ ಪತ್ರ ನೀಡುವಂತೆ ಉಪ ವಿಭಾಗಾಧಿಕಾರಿಗಳಿಗೆ ಅರ್ಜಿ ನೀಡಿದ್ದು ಆ ಅರ್ಜಿಯ ಆಧಾರದ ಮೇಲೆ ಕಂದಾಯ ಅಧಿಕಾರಿಗಳು ಮತ್ತ ಭೂ ಮಾಪನ ಅಧಿಕಾರಿಗಳು ಅಳತೆ ಕಾಮಗಾರಿ ಮಾಡಿ ದೃಢೀಕರಣ ಪತ್ರ ನೀಡಿದ್ದಾರೆ ಎಂದು ಹೇಳುತ್ತಾರೆ. ಪರಿಹಾರದ ಹಣವನ್ನು ಲಪಟಾಯಿಸುವ ಉದ್ದೇಶದಿಂದ ದೃಢೀಕರಣ ಪತ್ರವನ್ನು ಮೋಸದಿಂದ ಸೃಷ್ಟಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಮತ್ತ ಭೂ ಮಾಪನ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ನಮ್ಮ ತಂದೆಗೆ ಮಂಜೂರಾಗಿದ್ದ 0.24 ಗುಂಟೆ ಜಮೀನು ಒಳಚರಂಡಿ ವ್ಯವಸ್ಥೆ ಕಾಮಗಾರಿಗೆ ಭೂಸ್ವಾಧೀನವಾಗಿಲ್ಲ ಮತ್ತು ನಮ್ಮ ಅಜ್ಜಿಯಾದ ಸಣ್ಣಮ್ಮರವರ ಹೆಸರಿನಲ್ಲಿನ ಸರ್ವೆ ನಂ. 72/1 ಎ ರಲ್ಲಿ 0.32 ಗುಂಟೆ ಪೈಕಿ 0.24 ಗುಂಟೆ ಭೂಸ್ವಾಧೀನವಾಗಿದೆ ಎಂದು ವಾದಿಗೆ ತಿಳಿಸಿದರು ಎಂದರೆ ಸರಿ. ಈ ಸಂಬಂಧ ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿಕೊಡುವಂತೆ ವೆಂಕಟೇಶ್ ರವರು ಉಪ ವಿಭಾಗಾಧಿಕಾರಿಗಳಿಗೆ ಹಲವಾರು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೆ ಅರ್ಜಿ ನೀಡಿದಾಗಲೆಲ್ಲಾ ನನ್ನ ಪ್ರಭಾವ ಬೀರಿ ವಾಸ್ತವ ಅಂಶಗಳು ಗೊತ್ತಾಗದ ಹಾಗೆ ಇರುವಂತೆ ನೋಡಿಕೊಳ್ಳಲು ಆ ಅರ್ಜಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳದಂತೆ ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಮಂಜೂರಾಗಿದ್ದ 0.24 ಗುಂಟೆ ಜಮೀನ ಈಗಲೂ ಸಹ ನಮ್ಮ ಸ್ವಾಧೀನದಲ್ಲಿ ಇದ್ದು ಆ ಜಮೀನು ಒಳಚರಂಡಿ ವ್ಯವಸ್ಥೆಗೆ ಭೂಸ್ವಾಧೀನಗೊಂಡಿಲ್ಲ ಎಂದರೆ ಸರಿಯಲ್ಲ. ವಾಸ್ತವವಾಗಿ ನಮ್ಮ ಅಜ್ಜಿ ಸಣ್ಣಮ್ಮರವರ ಹೆಸರಿನಲ್ಲಿನ ಜಮೀನು ಭೂಸ್ವಾಧೀನಗೊಂಡಿದೆ ಎಂದರೆ ಸರಿಯಲ್ಲ.

ನಮ್ಮ ಅಜ್ಜಿ ಸಣ್ಣಮ್ಮರವರ ಹೆಸರಿನಲ್ಲಿ ಇದ್ದ ದಾವಾ ಆಸ್ತಿ ಐಟಂ ನಂ. 4 ನ್ನು ಸರ್ಕಾರವು ಭೂಸ್ವಾಧೀನಪಡಿಸಿಕೊಂಡಿದೆ ಎಂದರೆ ಸರಿ. ಆಗ ನಮ್ಮ ಅಜ್ಜಿ ಬದುಕಿದ್ದು ಅವರ ಹೆಸರಿನಲ್ಲಿಯೇ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಆಗಿದೆ ಎಂದರೆ ಸರಿ. ನಮ್ಮ ಅಜ್ಜಿ ಸಲ್ಲಿಸಿದ್ದ ಎಲ್ ಎ ಸಿ ನಂ. 4/2013 ಈಗಲೂ ಸಹ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಎಲ್ ಎ ಸಿ ನಂ. 4/2013 ನಡೆಯುವಾಗಲೇ ನಮ್ಮ ಅಜ್ಜಿ ಸಣ್ಣಮ್ಮ ತೀರಿಕೊಂಡರು ಎಂದರೆ ಸರಿ. ನಮ್ಮ ಅಜ್ಜಿ ಸಣ್ಣಮ್ಮ ತೀರಿಕೊಂಡ ನಂತರ ವಾರಸುದಾರರನ್ನು ಕಡತದ ಮೇಲೆ ತರಲು ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ನಾಗರಾಜೇಗೌಡ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ನಾಗರಾಜೇಗೌಡ ಮಾತ್ರ ವಕೀಲರ ಜೊತೆಯಲ್ಲಿ ಹಾಜರಾಗಿ ಅರ್ಜಿಗೆ ಸಹಿ ಮಾಡಿ ನಮ್ಮ ಚಿಕ್ಕಪ್ಪ ವೆಂಕಟೇಶ್ ರವರು ಆ ಅರ್ಜಿಗೆ ಸಹಿ ಮಾಡದೆ ಇದ್ದರೂ ಸಹ ಅವರಿಗೆ ಗೊತ್ತಿಲ್ಲದ ಹಾಗೆ ಅವರ ಹೆಸರನ್ನು ಮಾತ್ರ ಸೇರಿಸಿ ಅರ್ಜಿಯನ್ನು ಸಲ್ಲಿಸಿದಾದರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ತಂದೆ 2019 ರಲ್ಲಿ ತೀರಿಕೊಂಡರು. ನಮ್ಮ ತಂದೆ ತೀರಿಕೊಂಡ ನಂತರ ನಾನು ಹಾಗೂ ನನ್ನ ತಾಯಿ ಹಾಗೂ ನನ್ನ ಒಡಹುಟ್ಟಿದವರು ಕಡತದ ಮೇಲೆ ಬರಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಆದಾದ ನಂತರ ಎಲ್ ಎ ಸಿ ನಂ. 4/2013 ರಲ್ಲಿ ನಾನು ವಿಚಾರಣೆಗೆ ಒಳಗಾಗಿದ್ದೇನೆ ಎಂದರೆ ಸರಿ. ನಮ್ಮ ತಂದೆ ಹಾಗೂ ಚಿಕ್ಕಪ್ಪ ಅರ್ಜಿ ಸಲ್ಲಿಸಿದಾಗ ಆಗಲೀ ಅಥವಾ ನಾನು ಮತ್ತು ನನ್ನ ತಾಯಿ ಹಾಗೂ ಒಡಹುಟ್ಟಿದವರು ಅರ್ಜಿ ಸಲ್ಲಿಸಿದಾಗ ಆಗಲೀ ಅಥವಾ ನಾನು ವಿಚಾರಣೆಗೆ ಒಳಪಟ್ಟಾಗ ಆಗಲೀ 1984 ಮತ್ತು 1986 ಪಾಲುಪಟ್ಟಿಯ ಬಗ್ಗೆ ಏನನ್ನು ಹೇಳಿಲ್ಲ ಎಂದರೆ ಸರಿಯಲ್ಲ.1984 ಮತ್ತು 1986 ರಲ್ಲಿ ಯಾವುದೇ ಪಾಲುಪಟ್ಟಿ ಆಗದೆ ಇದ್ದರೂ ಸಹ ನಾನು ಹಾಗೂ ನಮ್ಮ ಚಿಕ್ಕಪ್ಪ ನಾಗರಾಜೇಗೌಡ ಮತ್ತು ಸಾಕ್ಷಿದಾರರು ಸೇರಿಕೊಂಡು ದಾವಾ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ಆ ಎರಡು ಪಾಲುಪಟ್ಟಿಗಳನ್ನು ಸೃಷ್ಟಿ

ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ.1 ಮತ್ತು 2 ನಮ್ಮ ಅಜ್ಜಿ ಸಣ್ಣಮ್ಮ ಬದಕಿರುವವರೆಗೂ ಅವರ ಹೆಸರಿನಲ್ಲಿ ಇದ್ದು ಅವರು ಮೃತರಾದ ನಂತರ ಇತ್ತೀಚೆಗೆ ನನ್ನ ತಾಯಿ ವನಜಾಕ್ಷಮ್ಮ ಹಾಗೂ ನಮ್ಮ ಚಿಕ್ಕಪ್ಪಂದಿರಾದ ವೆಂಕಟೇಶ್ ಮತ್ತು ನಾಗರಾಜೇಗೌಡರ ಹೆಸರಿಗೆ ಬದಲಾಗಿದೆ ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**